- ಏಪ್ರಿಲ್ ಸಂಚಿಕೆ ನವಿರಾದ ಬರಹಗಳಿಂದ ಆಕರ್ಷಿಸಿತು. ಒರಿಯಾದ ಮೊದಲ ಸಣ್ಣಕತೆ 'ರೇವತಿ' (ಮೂಲ: ಫಕೀರ್ ಮೋಹನ್ ಸೇನಾಪತಿ, ಕನ್ನಡಕ್ಕೆ: ಎಸ್. ದಿವಾಕರ್) ಸರಳ ಭಾಷೆ, ಉತ್ತಮ ನಿರೂಪಣೆಯಿಂದ ಕನ್ನಡದ ಕತೆ ಎನ್ನಿಸುವಷ್ಟು ಆಪ್ತವಾಗಿದೆ. ಶ್ವೇತಾ ನರಗುಂದ ಅವರ ಕತೆ 'ದ್ವಂದ್ವ' ಊಹಿಸಲಾಗದ ರೀತಿಯಲ್ಲಿ ಕೊನೆಗೊಳ್ಳುತ್ತದೆ.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಕುರಿತ ಬರಹ 'ತೇಜಸ್ವಿ ನೆನಪು' (ಪದ್ಮಾ ಶ್ರೀರಾಮ) ಪ್ರತಿಭಾವಂತ ಲೇಖಕನ ಸಮೀಪದ ಚಿತ್ರವನ್ನು ಕೊಟ್ಟಿದೆ. 'ಸಾರ್ತ್ರ್‌ರ ಕೊನೆಯ ದಿನಗಳು' (ಮೂಲ: ಸಿಮೊನ್ ದ ಬೊವಾ) ವಿಕ್ರಮ ವಿಸಾಜಿ ಅವರ ಸಮರ್ಥ ಅನುವಾದದಿಂದ ಸರಾಗವಾಗಿ ಓದಿಸಿಕೊಳ್ಳುತ್ತದೆ.

**ಟಿ.ಎಸ್. ರಾಜೇಂದ್ರಪ್ರಸಾದ್, ತೇಕಲವಟ್ಟಿ**


- 'ತೇಜಸ್ವಿ ನೆನಪು' ಲೇಖನ ತೇಜಸ್ವಿಯವರ ಬರವಣಿಗೆಯ ಶಕ್ತಿ, ಕ್ರಿಯಾಶೀಲತೆ, ಹುಮ್ಮಸ್ಸನ್ನು ಮತ್ತೊಮ್ಮೆ ನೆನಪಿಸಿತು.

**ರವಿ ಮುನವಳ್ಳಿ, ವೆಂಕಟೇಶ್ ದಾವಣಗೆರೆ,**
**ಸಾವಿತ್ರಿ ಶ್ಯಾನುಭಾಗ್, ಕುಂದಾಪುರ**

- ಟಿ.ಎಸ್. ಎಲಿಯಟ್ ಪ್ರಶಸ್ತಿ ಪುರಸ್ಕೃತ ಕವಯಿತ್ರಿ ಭಾನು ಕಪಿಲ್ ಅವರ ಕಾವ್ಯದ ಬಗೆಗಿನ ಲೇಖನ 'ಅಪರಿಚಿತರ ಹೊಸ್ತಿಲಲ್ಲಿ ಆಶ್ವಾಸನೆಯ ಶೋಧನೆ' (ಕಮಲಾಕರ ಕಡವೆ) ಆಪ್ತವಾಗಿತ್ತು.

**ಶಾರದಾ ಗೋಖಲೆ, ಚಿಕ್ಕೋಡಿ**

- ಕೇಶವರೆಡ್ಡಿ ಹಂದ್ರಾಳರ ನೀಳ್ಗತೆ 'ತಂಗ್ಯನ ಎಲಕ್ಕಿ ಬುಡ್ಡು' ತುಮಕೂರು ಜಿಲ್ಲೆಯ




ಮಧುಗಿರಿ ಭಾಗದ ಭಾಷಾ ಸೊಗಡಿನ ನಿರೂಪಣೆಯಿಂದ ಗಮನ ಸೆಳೆಯಿತು. 'ಎಲಕ್ಕಿ ಬುಡ್ಡು ತಿಂದರೆ ಪುರುಷತ್ವ ಹಾಳಾಗುತ್ತದೆ' ಎನ್ನುವುದಕ್ಕೆ ಕತೆಯಲ್ಲಿ ಹೆಚ್ಚಿನ ಒತ್ತು ಕೊಟ್ಟಿರುವುದು ಅಚ್ಚರಿ ಮೂಡಿಸಿತು.

**ಎಂ.ಜಿ. ರಂಗಸ್ವಾಮಿ, ಹಿರಿಯೂರು,**
**ಶಂಕರೇಗೌಡ ತುಂಬಕೆರೆ, ಮಂಡ್ಯ**

- ತುರುವೇಕೆರೆ ರವಿಶಂಕರ್ ಅವರ 'ನೀತಿ ಬಿಟ್ಟ ಮನುಜನೂ ನಿಯತ್ತು ಮರೆತ ಶ್ವಾನಗಳೂ' ಪ್ರಬಂಧ ಸೊಗಸಾಗಿದೆ. ಇಂದಿಗೂ ನೀತಿ–ನಿಯತ್ತಿನ ವಿಚಾರದಲ್ಲಿ ಶ್ವಾನಗಳಿಗೆ ಮಾನವ ಸಾಟಿಯಾಗಲಾರ ಎನ್ನುವುದು ನಿಜ.

**ರಾಜೀವ್ ಎನ್. ಮಾಗಲ್, ಸಕಲೇಶಪುರ**

- ಕಪ್ಪು–ಬಿಳುಪಿನ ನೆನಪುಗಳನ್ನು ಮುನ್ನೆಲೆಗೆ ತರುವ 'ಸ್ಮೃತಿಬಿಂಬ' ಅಂಕಣ ಅಪರೂಪದ ಪ್ರಯೋಗ. ಈ ಸಂಚಿಕೆಯ ಚಿತ್ರದಲ್ಲಿ ಗೀತರಚನಕಾರರಾದ ಮಜರೂಹ್ ಸುಲ್ತಾನ್‌ಪುರಿ, ಗುಲ್ಜಾರ್ ಅವರೊಂದಿಗೆ ನಮ್ಮ ನಟ ರಾಜಕುಮಾರ್ ಅವರನ್ನು ಕಂಡು ಸಂತೋಷವಾಯಿತು.

**ಸೇತುರಾವ್ ಕುಲಕರ್ಣಿ, ಬೆಂಗಳೂರು**